# ಬೋಧಕರ ವಿವರ

| | | |
|---|---|---|
| ೧. ಹೆಸರು | : | ಡಾ.ವೆಂಕಟೇಶ ಇಂದ್ವಾಡಿ |
| ೨. ಜನ್ಮ ದಿನಾಂಕ | : | ೨೦.೦೧.೧೯೬೪ |
| ೩. ವಿದ್ಯಾರ್ಹತೆ | : | ಎಂ.ಫಿಲ್, ಪಿಎಚ್.ಡಿ |
| ೪. ಕಚೇರಿ ವಿಳಾಸ | : | ಮುಖ್ಯಸ್ಥರು ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರ<br>ಕನ್ನಡ ವಿಶ್ವವಿದ್ಯಾಲಯ, ಕುರುಬನಕಟ್ಟೆ, ಕೆಂಪನಪಾಳ್ಯ ಅಂಚೆ,<br>ಕೊಳ್ಳೇಗಾಲ-೫೭೧೪೪೦ |
| ೪.೧. ಮನೆ ವಿಳಾಸ | : | # ೪೪೬, ೭ನೇ ಮೇನ್, ೧ನೇ ಕ್ರಾಸ್, ಎಚ್ ಬ್ಲಾಕ್,<br>ರಾಮಕೃಷ್ಣನಗರ, ಮೈಸೂರು-೨೩ |
| ೫. ಸ್ಥಿರ ದೂರವಾಣಿ | : | – |
| ೬. ಮೊಬೈಲ್ ಸಂಖ್ಯೆ | : | ೯೮೮೬೩೪೫೫೦೬ |
| ೭. ಫ್ಯಾಕ್ಸ್ ಸಂಖ್ಯೆ | : | – |
| ೮. ಇ-ಮೇಲ್ ವಿಳಾಸ | : | indvadi@yahoo.com |
| ೯. ಕಾರ್ಯನಿರ್ವಹಿಸುತ್ತಿರುವ ವಿಭಾಗ | : | ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರ, ಕುರುಬನಕಟ್ಟೆ |
| ೧೦. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ | : | ಸಹ ಪ್ರಾಧ್ಯಾಪಕ |

೧೧. ವಿಷಯ ತಜ್ಞತೆ
- ೧. ಜನಪದ ಮಹಾಕಾವ್ಯ
- ೨. ಜನಪದ ರಂಗಭೂಮಿ
- ೩. ಆಧುನಿಕ ಸಾಹಿತ್ಯ
- ೪. ಸಂಸ್ಕೃತಿ ಚಿಂತನೆ

೧೨. ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು
- ೧. ಜನಪದ ಮಹಾಕಾವ್ಯ
- ೨. ಜನಪದ ರಂಗಭೂಮಿ
- ೩. ಆಧುನಿಕ ಸಾಹಿತ್ಯ
- ೪. ಸಮುದಾಯಗಳ ಅಧ್ಯಯನ

೧೩. ಯೋಜನೆಗಳ ವಿವರ

೧೩.೧. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು

೧. ಧರ್ಮ ವಿಶ್ವಕೋಶ ಸಹ ಸಂಪಾದಕತ್ವ ೧೯೯೯
೨. ಕನ್ನಡ ಕನ್ನಡಿ ೨೦೦೦
೩. Construction of kannada Nativity on interaction With Folk Epics (Co-Investigator, UGC Major Project 01.01.2005 to 31.12.2007)

೧೩.೨. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು

೧. ಚಾಮರಾಜನಗರ ಜಿಲ್ಲಾ ತೆಲುಗು ಅಲೆಮಾರಿಗಳ ಒಂದು ಪಂಗಡದ ಅಧ್ಯಯನ: (೧೯೯೮)



PDF created with pdfFactory trial version www.pdffactory.com

ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯಲ್ಲಿ ವಾಸವಾಗಿರುವ ಒಂದು ಅಲೆಮಾರಿ ಪಂಗಡ. ಈ ತರಹದ ಒಂದು ಅಲ್ಪಸಂಖ್ಯಾತ ಪಂಗಡ ಅನುಭವಿಸುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಕುರಿತಂತೆ ಒಂದು ಚಾರಿತ್ರಿಕ ಅಧ್ಯಯನ.

೨. ಮಂಟೇಸ್ವಾಮಿ ಒಕ್ಕಲುಗಳ ಸಾಂಸ್ಕೃತಿಕ ಅಧ್ಯಯನ (೧೯೯೯)

ನೀಲಗಾರ ಪರಂಪರೆಯನ್ನು ಕುರಿತಂತೆ ಇದುವರೆಗಿನ ಮೌಖಿಕ ಸಾಹಿತ್ಯ ಹಾಗೂ ಚಾರಿತ್ರಿಕ ಆಕರಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿ ವಚನ ಪರಂಪರೆಯ ಮುಂದುವರಿಕೆಯಾದ ನೀಲಗಾರ ಪರಂಪರೆಯ ಬಗ್ಗೆ ತಲಸ್ಪರ್ಷಿ ಅಧ್ಯಯನ. ವಸಹತುಶಾಹಿ ಪ್ರಭಾವದಿಂದ ದಿಗ್ಗಟ್ಟು ಹೋಗಿದ್ದ ಸಾಂಸ್ಕೃತಿಕ ದಾರಿಗಳ ಒಂದು ಪುನರ್ ಪರಿಶೀಲನೆ ಇಲ್ಲಿ ನಡೆದಿದೆ. ಉತ್ತರ ದಕ್ಷಿಣವಾಗಿ ಹರಡಿಕೊಂಡಿದ್ದ ನೀಲಗಾರ ಪರಂಪರೆಯ ಕಡಿದು ಹೋಗಿದ್ದ ಸಾಂಸ್ಕೃತಿಕ ಸಂಬಂಧಗಳನನು ಈ ಕೃತಿಯ ಮೂಲಕ ಶೋಧಿಸಲಾಗಿದೆ.

೩. ನೀಲಗಾರ ಸಾಂಸ್ಕೃತಿಕ ಪದಕೋಶ (೨೦೦೧)

ನೀಲಗಾರ ಪರಂಪರೆಯು ಬಳಸಿರುವ ಸಾಂಸ್ಕೃತಿಕ ಭಾವಕೋಶ, ಆಚರಣಾ ಕೋಶ, ಚಾರಿತ್ರಿಕ ದಾಖಲಾತಿ ಇತ್ಯಾದಿಗಳನ್ನು ಒಳಗೊಂಡಂತೆ ನೀಲಗಾರ ಪರಂಪರೆ ಪದಗಳ ಹಿಂದಿನ ತಾತ್ವಿಕ ಅಂಶಗಳ ಹಿನ್ನೆಲೆಯಲ್ಲಿ ಅವುಗಳ ನಿಷ್ಪತ್ತಿಯನ್ನು ವಿಷದಪಡಿಸಿರುವ ಸಾಂಸ್ಕೃತಿಕ ಪದಕೋಶ.

೪. ಬಾಲಬಸವ ಸಂಪ್ರದಾಯವನ್ನು ಕುರಿತು ಸಾಂಸ್ಕೃತಿಕ ಅಧ್ಯಯನ (ಯುಜಿಸಿ ಕಿರಿಯ ಯೋಜನೆ ೨೦೦೬)

ವಚನ ಚಳವಳಿಯಿಂದ ಪ್ರಭಾವಿತವಾದ ಅನೇಕ ಸಾಂಸ್ಕೃತಿಕ ಪಂಥಗಳು ಕರ್ನಾಟಕದ್ಯಾಂತ ಹರಡಿಕೊಂಡಿದೆ. ಬಸವಣ್ಣನ ಅನುಯಾಯಿಗಳು ಸೃಷ್ಟಿಸಿದ ವೀರಶೈವ ಧರ್ಮ ಇತರ ಸಮುದಾಯಗಳನ್ನು ಧಮನಿಸುವ ಪ್ರಯತ್ನ ಮಾಡಿದಾಗ ಅವುಗಳಿಗೆ ಪ್ರತಿರೋಧವಾಗಿ ತಮ್ಮದೇ ಆದ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ನಿರ್ಮಾಣ ಮಾಡಿಕೊಂಡು ತಮ್ಮ ಜೀವನ ಕ್ರಮದಲ್ಲಿ ವೀರಶೈವರಂತೆ ಸಸ್ಯಹಾರಿಗಳಾಗಿ ಸಮಾಜದಲ್ಲಿ ಅತ್ಯೊಂತ ಕೆಳವರ್ಗದವರಾದ ಮಾದಿಗ ಕುಲದವರು ಅಭಿವ್ಯಕ್ತಪಡಿಸಿರುವ ಕಾವ್ಯ ಇದಾಗಿದೆ.

೫. ಜನಪದ ಕಾವ್ಯಮೀಮಾಂಸೆ

ಜನಪದ ಸಾಹಿತ್ಯವನ್ನು ಕುರಿತಂತೆ ಇದುವರೆಗೆ ಬಂದಿರುವ ಅತ್ಯುತ್ತಮ ಲೇಖನಗಳನ್ನು ಆಯ್ಕೆ ಮಾಡಿ ಕರ್ನಾಟಕದಲ್ಲಿ ಜನಪದ ಅಧ್ಯಯನ ಬೆಳೆದು ಬಂದ ಚರಿತ್ರೆಯನ್ನು ಗುರುತಿಸುವುದರ ಜೊತೆಗೆ ಒಂದು ಜನಪದ ಮೀಮಾಂಸೆಯನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ.

**೧೪. ಪ್ರಗತಿಯಲ್ಲಿರುವ ಯೋಜನೆಗಳು**

೧. **ಕನ್ನಡ ಶಾಸ್ತ್ರೀಯಾ ಭಾಷಾ ಯೋಜನೆ :** ಮಂಟೇಸ್ವಾಮಿ ಕಾವ್ಯ ಓದುವ ಪಠ್ಯ ನಿರ್ಮಾಣ ೨೦೦೯-೧೦ (೧ ವರ್ಷದ ಅವಧಿ)

ಕನ್ನಡ ಮೌಖಿಕ ಪರಂಪರೆಯಲ್ಲಿ ಹೆಚ್ಚು ಚರ್ಚೆಯಾಗುತ್ತಿರುವ ಜನಪದ ಮಹಾಕಾವ್ಯಗಳಲ್ಲಿ ಮಂಟೇಸ್ವಾಮಿ ಕಾವ್ಯವು ಒಂದಾಗಿದೆ. ಪ್ರಸ್ತುತ ಮಹಾಕಾವ್ಯವನ್ನು ಐದು ಮಂದಿ ಸಂಪಾದಕರು ಬೇರೆ ಬೇರೆ ಕಲಾವಿದರಿಂದ ಸಂಗ್ರಹಿಸಿ ಸಂಪಾದಿಸಿ ಗ್ರಂಥ ರೂಪದಲ್ಲಿ ಪ್ರಕಟಿಸಿದ್ದಾರೆ. ಈ ಐದು ಪಠ್ಯಗಳಲ್ಲಿ ಕೆಲವು ಕಥಾ ಭಾಗಗಳಲ್ಲಿ ಎದ್ದು ಕಾಣುವ ಪುನಾರವರ್ತನೆಗಳು ಇವೆ. ಒಂದು ಕಥಾಭಾಗ ಸಾಹಿತ್ಯಕವಾಗಿ ಶ್ರೀಮಂತವಾಗಿದ್ದು ಅದೇ ಭಾಗ ಉಳಿದ ಪಠ್ಯಗಳಲ್ಲಿ ಪೇರಲವಾಗಿರುತ್ತದೆ. ಹಾಡುವ ಪಠ್ಯವಾಗಿರುವುದರಿಂದ ಹೆಚ್ಚು ಭಾಗಗಳಲ್ಲಿ ಪ್ರಕೃತಿಯ ವರ್ಣನೆ, ಹೆಣ್ಣನ್ನು ಕುರಿತ ವರ್ಣನೆ, ಶ್ರೀಮಂತಿಕೆಯನ್ನು ಕುರಿತ ವರ್ಣನೆ, ಆಚರಣೆಗಳ ಸಂಭ್ರಮದ ವರ್ಣನೆ ಮತ್ತೆ ಮತ್ತೆ ಬರುತ್ತದೆ. ಓದುವ ಪಠ್ಯದಲ್ಲಿ ಈ ವರ್ಣನೆಗಳು ಯಾವ ಕಥಾ ಭಾಗಕ್ಕ ಔಚಿತ್ಯವಾಗುತ್ತವೆ ಮತ್ತು ಪಠ್ಯದ ಬಂಧಕ್ಕೆ ಸೂಕ್ತವಾಗುತ್ತವೆ ಅಲ್ಲಿ ಮಾತ್ರ ಅವುಗಳನ್ನು ಉಳಿಸಿಕೊಂಡು ಕಾವ್ಯತ್ಮಕವಾಗಿ ಹೆಚ್ಚು ಸಾಂದ್ರವಾಗುವಂತೆ ಪಠ್ಯವೊಂದನ್ನು ನಿರ್ಮಾಣಮಾಡುವುದು. ಪ್ರಸ್ತುತ ಕಾಲಘಟ್ಟದಲ್ಲಿ ಮಂಟೇಸ್ವಾಮಿ ಕಾವ್ಯವನ್ನು ಹಾಡುತ್ತಿರುವ ಹೊಸ ತಲೆಮಾರಿನ ಹೆಸರಾಂತ ಐದು ತಂಡಗಳನ್ನು ಗುರುತಿಸಿ ಅವರು ವರ್ತಮಾನಕ್ಕೆ ಬೇಕಾದಂತೆ ಮಾಡಿಕೊಂಡಿರುವ ಮಾರ್ಪಾಡುಗಳನ್ನು ಓದುವ ಪಠ್ಯ ನಿರ್ಮಾಣದಲ್ಲಿ ಸೇರಿಸಲಾಗುವುದು. ಆ ಮೂಲಕ ಪ್ರಾಚೀನ ಮತ್ತು ಆಧುನಿಕ ಸಂದರ್ಭದಲ್ಲಿಯೂ ಈ ಪಠ್ಯ ಹೇಗೆ ಚಲನೆಯನ್ನು ಉಳಿಸಿಕೊಂಡಿದೆ ಎಂಬುದನ್ನು ಓದುವ ಪಠ್ಯ ನಿರ್ಮಾಣದಲ್ಲಿ ಗುರಿತಿಸಲಾಗುವುದು.

೨. **ಚಾಮರಾನಗರ ಜಿಲ್ಲಾ ಜ್ಞಾನಕೋಶ ವೆಬ್‌ಸೈಟ್:** ೨೦೦೯-೨೦೧೦

ಚಾಮರಾಜನಗರ ಜಿಲ್ಲೆ ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾದರೂ ಸಾಂಸ್ಕೃತಿಕವಾಗಿ ಮತ್ತು ಜನಪದೀಯವಾಗಿ ಅತಂತ್ಯ ಶ್ರೀಮಂತವಾದ ಜಿಲ್ಲೆಯಾಗಿದೆ. ಇದಕ್ಕೆ ಬಹಳ ಮುಖ್ಯ ಕಾರಣ ಯಾವುದೇ ರಾಜನ ನೇರ ಆಳ್ವಿಕೆ ಅಥವಾ ಸಾಮ್ರಾಜ್ಯ ಸ್ಥಾಪನೆಗಳು ಈ ಭೂ ಭಾಗದಲ್ಲಿ ಆಗದೆ ಇರುವುದರಿಂದ ಜನ ಸಂಸ್ಕೃತಿಗೆ ಹೆಚ್ಚು ಪ್ರೇರೇಪಣೆ ಸಿಕ್ಕಿ ವೈವಿಧ್ಯಮಯವಾದ, ಅಧಿಕಾರ ಮುಕ್ತವಾದ ಜನ ಸಂಸ್ಕೃತಿಗಳು ನಿರ್ಮಾಣವಾಗಿವೆ. ಈ ಕಾರಣದಿಂದಲ್ಲೇ ಮಂಟೇಸ್ವಾಮಿ ಮತ್ತು ಮಹಾದೇಶ್ವರರ ಎರಡು ಮೌಖಿಕ ಮಹಾಕಾವ್ಯಗಳು ಈ ಭಾಗದಿಂದಲೇ ನಿರ್ಮಾಣವಾಗಿವೆ. ಗಡಿನಾಡ ಪ್ರದೇಶವಾಗಿರುವುದರಿಂದ ಜಿಲ್ಲೆಯ



PDF created with pdfFactory trial version www.pdffactory.com

ದ್ವಿಭಾಷಿಕ ಪರಿಸರ ಕುರಿತ ಉನ್ನತ ಅಧ್ಯಯನಗಳಿಗೆ ಆಕರವಾಗಿದೆ. ಇಷ್ಟೇ ಅಲ್ಲದೆ ನದಿ, ಬೆಟ್ಟ ಕಾಡುಗಳಿಂದ ಸುತ್ತುವರಿದ ಪ್ರಾಕೃತಿಕ ಶ್ರೀಮಂತಿಕೆ ಈ ಭಾಗದ್ದಾಗಿದೆ. ಇಂತಹ ಮಹತ್ವದ ಜಿಲ್ಲೆಯ ಭೌಗೋಳಿಕತೆ, ರಾಜಕೀಯ ಚರಿತ್ರೆ, ಧಾರ್ಮಿಕ ಇತಿಹಾಸ, ಜನಪದ ಧರ್ಮಗಳು, ಬುಡಕಟ್ಟುಗಳ ಚರಿತ್ರೆ, ಶೈಕ್ಷಣಿಕ ಚರಿತ್ರೆ, ಸಾಹಿತ್ಯ ಚರಿತ್ರೆ, ಕೃಷಿ ಪದ್ಧತಿ, ಕೆರೆ ನೀರಾವರಿ, ಕೈಗಾರಿಕೆ ಅಭಿವೃದ್ಧಿ ಸಾಂಪ್ರಾದಾಯಿಕ ಕಸುಬುಗಳು ಇನ್ನೂ ಮುಂತಾದ ವಿಷಯಗಳನ್ನು ಕುರಿತಂತೆ ಉಲ್ಲೇಖಗಳನ್ನು ಬರೆದು ಸಚಿತ್ರ ಪೂರ್ಣವಾಗಿ ವೆಬ್‌ಸೈಟ್ ನಿರ್ಮಾಣ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ.

೫.**ಯುಜಿಸಿ ಪ್ರಧಾನ ಯೋಜನೆ** : 'Index of Karnataka Folk Epic narrators and its Cultural Significance' (2010-2012)

In n approximate estimate there are some ten major folk epic and more than 50 Folk long poems existing in Kannada. Though very recently some of these narrations have been documented and published in print form. The actual Dynamics of textual variations based on cult sect and regional community base have not been reflected in the print versions. It is an enormous work to present these textual variations in full text form. But the features of these specialties in the form of narration and noticeable detail in content are very important to understand the dynamics of olk culture and its heritage memories. This is a part of the focus of this major research.

## ೧೫. ಪ್ರಕಟಣೆಗಳು

### ೧೫.೧. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು

**೧. ಮಂಟೇಸ್ವಾಮಿ ಪರಂಪರೆ : ಪ್ರ : ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯**

ನೀಲಗಾರ ಪರಂಪರೆಯನ್ನು ಕುರಿತಂತೆ ಇದುವರೆಗಿನ ಮೌಖಿಕ ಸಾಹಿತ್ಯ ಹಾಗೂ ಚಾರಿತ್ರಿಕ ಆಕರಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿ ವಚನ ಪರಂಪರೆಯ ಮುಂದುವರಿಕೆಯಾದ ನೀಲಗಾರ ಪರಂಪರೆಯ ಬಗ್ಗೆ ತಲಸ್ಪರ್ಶಿ ಅಧ್ಯಯನ. ವಸಹತುಶಾಹಿ ಪ್ರಭಾವದಿಂದ ದಿಕ್ಕೆಟ್ಟು ಹೋಗಿದ್ದ ಸಾಂಸ್ಕೃತಿಕ ದಾರಿಗಳ ಒಂದು ಪುನರ್ ಪರಿಶೀಲನೆ ಇಲ್ಲಿ ನಡೆದಿದೆ. ಉತ್ತರ ದಕ್ಷಿಣವಾಗಿ ಹರಡಿಕೊಂಡಿದ್ದ ನೀಲಗಾರ ಪರಂಪರೆಯ ಕಡಿದು ಹೋಗಿದ್ದ ಸಾಂಸ್ಕೃತಿಕ ಸಂಬಂಧಗಳನ್ನು ಈ ಕೃತಿ ಶೋಧಿಸಿಕೊಟ್ಟಿದೆ.

**೨. ನೀಲಗಾರರು : ಸಾಂಸ್ಕೃತಿಕ ಪದಕೋಶ, ಪ್ರ : ಪ್ರಸಾರಾಂಗ, ಕವಿವಿ, ಹಂಪಿ, ೨೦೦೦**

ನೀಲಗಾರ ಪರಂಪರೆಯು ಬಳಸಿರುವ ಸಾಂಸ್ಕೃತಿಕ ಭಾವಕೋಶ, ಆಚರಣಾ ಕೋಶ, ಚಾರಿತ್ರಿಕ ದಾಖಲಾತಿ ಇತ್ಯಾದಿಗಳನ್ನು ಒಳಗೊಂಡಂತೆ ನೀಲಗಾರ ಪರಂಪರೆಯ ಪದಗಳ ಹಿಂದಿನ ತಾತ್ವಿಕ ಅಂಶಗಳು ಮತ್ತು ನಿಷ್ಪತ್ತಿಯನ್ನು ಕಟ್ಟಿಕೊಡುವ ಸಾಂಸ್ಕೃತಿಕ ಪದಕೋಶ.

**೩. ದೇವದೇವಿ, ಪ್ರ : ಪ್ರಸಾರಾಂಗ, ಕವಿವಿ, ಹಂಪಿ, ೨೦೦೩**

ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯಲ್ಲಿ ವಾಸವಾಗಿರುವ ಒಂದು ಅಲೆಮಾರಿ ಪಂಗಡ. ಈ ತರಹದ ಒಂದು ಅಲ್ಪಸಂಖ್ಯಾತ ಪಂಗಡ ಅನುಭವಿಸುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

**೪. ಬಾಲಬಸವ ತುಮುನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯ, ಪ್ರಸಾರಾಂಗ, ಕವಿವಿ, ಹಂಪಿ, ೨೦೦೪**

ವಚನ ಚಳವಳಿಯಿಂದ ಪ್ರಭಾವಿತವಾದ ಅನೇಕ ಸಾಂಸ್ಕೃತಿಕ ಪಂಥಗಳು ಕರ್ನಾಟಕದ್ಯಾಂತ ಹರಡಿಕೊಂಡಿದೆ. ಬಸವಣ್ಣನ ಅನುಯಾಯಿಗಳು ಸೃಷ್ಟಿಸಿದ ವೀರಶೈವ ಧರ್ಮ ಇತರ ಸಮುದಾಯಗಳನ್ನು ಧಮನಿಸುವ ಪ್ರಯತ್ನ ಮಾಡಿದಾಗ ಅವುಗಳಿಗೆ ಪ್ರತಿರೋಧವಾಗಿ ತಮ್ಮದೇ ಆದ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ನಿರ್ಮಾಣ ಮಾಡಿಕೊಂಡು ತಮ್ಮ ಜೀವನ ಕ್ರಮದಲ್ಲಿ ವೀರಶೈವರಂತೆ ಸಸ್ಯಹಾರಿಗಳಾಗಿ ಸಮಾಜದಲ್ಲಿ ಅತ್ಯಂತ ಕೆಳವರ್ಗದವರಾದ ಮಾದಿಗ ಕುಲದವರು ಅಭಿವ್ಯಕ್ತಿಪಡಿಸಿರುವ ಕಾವ್ಯ ಇದಾಗಿದೆ.

### ೧೫.೨.ವೈಯಕ್ತಿಕ ಪ್ರಕಟಿತ ಕೃತಿಗಳು

೧. ಧರೆಗೆ ದೊಡ್ಡವರ ಕಥೆ. ಪ್ರ : ವಿಶ್ವಾಲಯ ಪ್ರಕಾಶನ, ಬೆಂಗಳೂರು, ೧೯೯೬

ನೀಲಗಾರ ಮೋಳೆರಾಚಯ್ಯ ಹಾಡಿದ ಮಂಟೇಸ್ವಾಮಿ ಕಾವ್ಯದ ಸಮಗ್ರ ಪಠ್ಯ. ಪ್ರಸ್ತುತ ಗಾಯಕ ನೀಲಗಾರ ಪರಂಪರೆಯ ಬೇರೆ ಬೇರೆ ಸಾಂಸ್ಕೃತಿಕ ಸಂದರ್ಭಗಳಲ್ಲಿ ಹಾಡಿದ್ದನ್ನು ಧ್ವನಿ ಮುದ್ರಣ ಮಾಡಿ ಅದರ ಸಾಹಿತ್ಯಿಕ ಅಂಶಗಳಿಗೆ ಹೆಚ್ಚು ಒತ್ತು ಕೊಟ್ಟು ಪುನಾರವರ್ತನೆಗಳನ್ನು ತೆಗೆದು ಹಾಕಿ ಕಥಾ ಭಾಗಕ್ಕೆ ಔಚಿತ್ಯವಾದಂತಹ ವಸ್ತು ವಿಷಯಗಳನ್ನು, ವರ್ಣನೆಗಳನ್ನು ಉಳಿಸಿಕೊಂಡು ಓದಿಗೆ ಭಿನ್ನವಾಗದಂತೆ ಪಠ್ಯವನ್ನು ಸುಲಲಿತವಾಗಿ ಆಸ್ವಾದಿಸುವ ಲಯ ತಾಳ ಸಾಹಿತ್ಯಿಕ ಗುಣಗಳನ್ನು ಬಳಸಿ ಸಂಪಾದಿಸಿದ ಪಠ್ಯವಾಗಿದೆ. ಪ್ರಸ್ತುತ ಪಠ್ಯಕ್ಕೆ ೧೯೯೬ನೇ ಕರ್ನಾಟಕ



PDF created with pdfFactory trial version www.pdffactory.com

ಜನಪದ ಅಕಾಡೆಮಿ ಪುಸ್ತಕ ಬಹುಮಾನ ದೊರೆತಿದೆ ಮತ್ತು ಮೈಸೂರು ವಿಶ್ವವಿದ್ಯಾಲಯದ ಜನಪದ ಎಂ.ಎ ವಿದ್ಯಾರ್ಥಿಗಳಿಗೆ ಪಠ್ಯವಾಗಿದೆ.

೨. ಸೂತಕವೆಂಬ ರೂಪಕ, ಪ್ರ : ಕಂಸಾಳೆ ಪ್ರಕಾಶನ, ಮೈಸೂರು, ೨೦೦೭

೧೯೯೬ ರಿಂದ ೨೦೦೭ರವರೆಗೆ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನ. ಈ ಸಂಕಲನದಲ್ಲಿ ಸಾಂಸ್ಕೃತಿಕ ನಾಯಕರು ಸಂಚರಿಸಿದ ಮಾರ್ಗಗಳನ್ನು ಕುರಿತಂತೆ Cultural map ಅನ್ನು ಕಟ್ಟಿಕೊಡಲಾಗಿದೆ. ವೀರಶೈವಧರ್ಮ ಸಾಂಸ್ಥಿಕ ರೂಪ ಪಡೆದ ಚರಿತ್ರೆಯನ್ನು ಅಧ್ಯಯನ ಮಾಡಲಾಗಿದೆ ಮತ್ತು ಚಾಮರಾಜನಗರ ಜಿಲ್ಲೆಯ ಅಪರೂಪದ ಆಚರಣೆಯಾದ 'ಸಾವಿನ ಅಭಿನಯದ ನರಬಲಿ ಹಬ್ಬ'ದ ಬಗ್ಗೆ ಅಧ್ಯಯನ ಮಾಡಲಾಗಿದೆ. ಇದರ ಜೊತೆಗೆ ಸಾಹಿತ್ಯ ಸಂಸ್ಕೃತಿ ಚಿಂತನೆಗೆ ಸಂಬಂಧಪಟ್ಟ ಲೇಖನಗಳು ಇವೆ.

**೧೫.೩. ಸಂಪಾದಿತ ಕೃತಿಗಳು**

**೧. ದೇವಚಂದ್ರನ ರಾಜಾವಳಿ ಕಥೆ (ಸಂ), ಪ್ರಸಾರಾಂಗ, ಕವಿವಿ, ಹಂಪಿ, ೨೦೦೩**

ದೇವಚಂದ್ರನ ರಾಜಾವಳಿ ಕಥೆ ಕರ್ನಾಟಕದ ಚರಿತ್ರೆಯ ಒಂದು ಸಂಘರ್ಷ ಗಳಿಗೆಯಲ್ಲಿ ಹುಟ್ಟಿದ ಸಂಕೀರ್ಣ ಪಠ್ಯ, ಪಾರಂಪರಿಕ ರಾಜ್ಯಾಡಳಿತಗಳು ಕೊನೆಗೊಂಡು, ವಸಹತುಷಾಹಿ ಆಳ್ವಿಕೆ ಪ್ರಾರಂಭವಾಗುತ್ತಿದ್ದ ಮೊದಲ ಘಟ್ಟದಲ್ಲಿ ಈ ಕೃತಿ ರೂಪ ತಳೆದಿದೆ. ರಾಷ್ಟ್ರೀಯ ಇತಿಹಾಸ ಕಲ್ಪನೆಗೆ ಹೊಂದಿಕೊಂಡಿರುವ ನಮಗೆ ರಾಜಾವಳಿ ಕಥೆ ಪೂರ್ವಾಗ್ರಹ, ಸುಳ್ಳುಗಳ ಕಂತೆ ಎಂದೆನಿಸಿ ಬಿಡುವ ಅಪಾಯವಿದೆ. ಸುಳ್ಳು ಪೂರ್ವಾಗ್ರಹಗಳ ಸಮಸ್ಯೆ ಕೇವಲ ರಾಜಾವಳಿ ಕಥೆಗಳಷ್ಟೇ ಅಲ್ಲ ಅದು ರಾಷ್ಟ್ರೀಯ ಇತಿಹಾಸಕ್ಕೂ ಅನ್ವಯಿಸುತ್ತದೆ. ಆದ್ದರಿಂದ ರಾಜಾವಳಿ ಕಥೆ ಕೊಡುತ್ತಿರುವ ದಾಖಲೆಗಳು ಚರಿತ್ರೆಯ ಪುನರ್ ವ್ಯಾಖ್ಯಾನಕ್ಕೂ ಬೇಕಾಗುತ್ತದೆ.

**೨. ಮಂಟೇಸ್ವಾಮಿ ಕಾವ್ಯ :**

ಸಾಂಸ್ಕೃತಿ ಮುಖಾಮುಖಿ, (ಸಂ), ಪ್ರಸಾರಾಂಗ, ಕವಿವಿ, ಹಂಪಿ, ೨೦೦೬

ಮಂಟೇಸ್ವಾಮಿ ಕಾವ್ಯ ಕುರಿತಂತೆ ಇದುವರೆಗೆ ಬಂದಿರುವ ಸಂಪಾದಿತ ಕಾವ್ಯಗಳ ಹಿನ್ನೆಲೆಯಲ್ಲಿ ನಡೆದಿರುವ ಅಧ್ಯಯನಗಳ ಒಂದು ಪುನರ್ ಪರಿಶೀಲನೆ ಮತ್ತು ಈ ಪರಂಪರೆಗೆ ಸಂಬಂಧಪಟ್ಟ ಮಹತ್ವದ ಲೇಖನಗಳ ಸಂಗ್ರಹ ಕೃತಿ.

**೩. ಮಲೆಮಾದಪ್ಪನ ಕಾವ್ಯ :**

ಸಾಂಸ್ಕೃತಿಕ ಮುಖಾಮುಖಿ, (ಸಂ), ಪ್ರಸಾರಾಂಗ, ಕವಿವಿ, ಹಂಪಿ, ೨೦೦೮

ದಕ್ಷಿಣ ಕರ್ನಾಟಕದ ಕಾವೇರಿ ಇಕ್ಕೆಲಗಳಲ್ಲಿ ದೇವರಗುಡ್ಡರು ಹಾಡುವ ಮಲೆಮಾದೇಶ್ವರನ್ನು ಕುರಿತ ಇದುವರೆಗಿನ ಸಂಪಾದಿತ ಪಠ್ಯಗಳನ್ನು ಆಕರವಾಗಿಸಿಕೊಂಡು ಮತ್ತು ಮಲೆಮಾದೇಶ್ವರ ಕಾವ್ಯದ ಮೇಲೆ ನಡೆದಿರುವ ಎಲ್ಲಾ ಅಧ್ಯಯನಗಳ ಪುನರ್ ಪರಿಶೀಲನೆ ಮಾಡಲಾಗಿದೆ ಇದಲ್ಲದೆ ಇದುವರೆಗೂ ಬಂದಿರುವ ಮುಖ್ಯವಾದ ಲೇಖನಗಳ ಆಂಥಾಲಾಜಿ ಇದಾಗಿದೆ.

೪. ಸಿರಿ ಜನಪದ ಕಾವ್ಯ : ಸಾಂಸ್ಕೃತಿಕ ಮುಖಾಮುಖಿ (ಸಂ) ಪ್ರಸಾರಾಂಗ, ಕವಿವಿ, ಹಂಪಿ, ೨೦೧೦

ಸಿರಿ ಜನಪದ ಕಾವ್ಯದ ಬಗ್ಗೆ ಇದುವರೆಗಿನ ಅಧ್ಯಯನಗಳ ಹಿನ್ನೆಲೆಯಲ್ಲಿ ಒಂದು ಪುನರ್ ಪರಿಶೀಲನೆ ಮತ್ತು ಈ ಕಾಲಘಟ್ಟದಲ್ಲಿ ಆಧುನಿಕ ವಿದ್ಯಾಮಾನಗಳ ಹಿನ್ನೆಲೆಯಲ್ಲಿ ಸಿರಿ ಪಠ್ಯವನ್ನು ಅರ್ಥೈಸುವ ಪ್ರಯತ್ನವನ್ನು ಈ ಕೃತಿಯ ಮೂಲಕ ಮಾಡಲಾಗಿದೆ.

**೧೬. ಪ್ರಕಟಿತ ಪ್ರಮುಖ ೧೦ ಲೇಖನಗಳು**

೧. ಮಲೆಯ ಮಾದಪ್ಪನ ಭೌಗೋಳಿಕ ಹಿನ್ನೆಲೆ
೨. ಪವಾಡಗಳು
೩. ಶೂನ್ಯ ಸಂಪಾದನೆಗಳು ಮತ್ತು ಮೌಖಿಕ ಕಾವ್ಯಗಳ ಮುಖಾಮುಖಿ
೪. ಪಾಳ್ಯದ ನರಬಲಿ ಹಬ್ಬ ಸಾವಿನ ಅಭಿನಯದ ಆಚರಣೆ
೫. ಜನಪದ ಸಾಹಿತ್ಯ ಸಂಪಾದನೆಯ ಸಂಶೋಧನಾತ್ಮಕ ತೊಡಕುಗಳು
೬. ಆಧುನಿಕ ಪೂರ್ವ ಪಠ್ಯಗಳಲ್ಲಿ ಬಸವಣ್ಣನನ್ನು ಕುರಿತ ಗ್ರಹಿಕೆಗಳು
೭. ವೀರಶೈವ ಕವಿ ರಾಘವಾಂಕ ಮಹಾಭಾರತದ ಹರಿಶ್ಚಂದ್ರನ ಕತೆಗೆ ಹಾರಿದ್ದು ಏಕೆ?
೮. ಸೂತಕವೆಂಬ ರೂಪಕ
೯. ಹದಿನೈದು–ಹದಿನಾರನೇ ಶತಮಾನದಲ್ಲಿ ದಲಿತ ಸಾಹಿತ್ಯ ಸಂಸ್ಕೃತಿ ಚಳವಳಿಗಳು
೧೦. ಅಧ್ಯಯನಗಳನ್ನು ಮೀರಿ ನಿಂತ ಸಿರಿ ಜನಪದ ಕಾವ್ಯ

**೧೭. ಪಿಎಚ್.ಡಿ ಮಾರ್ಗದರ್ಶನ**

| ಅಭ್ಯರ್ಥಿಗಳು | ಶೀರ್ಷಿಕೆ | ಪದವಿಘೋಷಿಸಿದ ದಿನಾಂಕ |
|---|---|---|



PDF created with pdfFactory trial version www.pdffactory.com

೧. ಸತೀಶ್ ಪಾಟೀಲ್  ಪಂಚಗಣಾಧೀಶ್ವರರು : ಒಂದು ಅಧ್ಯಯನ
೨. ಕೆ.ವಿ.ಮುದ್ದುವೀರಪ್ಪ ತುಮಕೂರು ಜಿಲ್ಲೆಯ ಕೋಟೆ ಕೊತ್ತಲಗಳ ಜನಪದೀಯ ಅಧ್ಯಯನ
೩. ಜಿ.ಎನ್.ಹನುಮಂತರಾಯ  ಜನಪದ ಮಹಾಕಾವ್ಯಗಳಲ್ಲಿ ದಲಿತೀಕರಣ ಒಂದು ಅಧ್ಯಯನ
೪. ಪೂರ್ಣಿಮ  ಆಧುನಿಕ ಮಹಿಳಾ ಕಾವ್ಯಗಳಲ್ಲಿ ಆದರ್ಶ ಪುರುಷನ ಹುಡುಕಾಟ ೨೦೧೦
೫. ಗಾದೆಪ್ಪ  ಆಧುನಿಕ ಕನ್ನಡ ಸಾಹಿತ್ಯದಲ್ಲಿವಿಜಯನಗರದ ಪ್ರತಿನಿಧೀಕರಣ ೨೦೧೦
೬. ಉಷಾರಾಣಿ ಮಹಿಳಾ ಸಾಹಿತ್ಯ : ಅಭಿವ್ಯಕ್ತಿ ಕ್ರಮದ ತಾತ್ವಿಕ ಸ್ವರೂಪ ೨೦೧೦
೭. ಜಗದೀಶ್ ತತ್ವಪದಗಳ ಅಧ್ಯಯನ ತಾತ್ವಿಕ ಸಮೀಕ್ಷೆ  (ಮಂಡಿಸಲಾಗಿದೆ)

**೧೮. ಎಂ.ಫಿಲ್ ಮಾರ್ಗದರ್ಶನ**

**(ಎಲ್ಲ ಪ್ರಬಂಧಗಳಿಗೂ ೫೦ ಪದಗಳ ಸಾರಾಂಶ)**

**ಅಭ್ಯರ್ಥಿಗಳು    ಶೀರ್ಷಿಕೆ    ಪದವಿಘೋಷಿಸಿದ ದಿನಾಂಕ**

೧. ಕೆ.ಎಚ್.ಕೊಟ್ರೇಶ  ೭೦ರ ದಶಕದ ಹತ್ತು ನಾಟಕಗಳ ಸ್ವರೂಪ ಮತ್ತು ಸಂರಚನೆ – ೨೦೦೨
೨. ಎಚ್.ಕೆ.ಅಶೋಕ ಶಂಕರಮೊಕಾಶಿ ಪುಣೇಕರ್ ಅವರ ಸಾಹಿತ್ಯದಲ್ಲಿ ಆಧುನಿಕತೆ ಮತ್ತು ಸಂಪ್ರದಾಯಗಳ ಸಂಘರ್ಷ  –೨೦೦೫
೩. ಪುಷ್ಪಲತಾ  ಪ್ರಸಿದ್ಧ ಕೆಲವು ಕನ್ನಡ ಕವಿಗಳ ದಂತಕಥೆಗಳ ಹಿಂದಿನ ತಾತ್ವಿಕತೆ –೨೦೦೬
೪. ಮಹಂತೇಶ್‌ಗೌಡ  ರಂಗಂಪೇಟೆ ಕನ್ನಡ ಸಂಘ : ಒಂದು ಸಾಂಸ್ಕೃತಿಕ ಅಧ್ಯಯನ –೨೦೦೮
೫. ಕುಮಾರಿ ಭವ್ಯ ಆಧುನಿಕ ಕನ್ನಡ ನಾಟಕಗಳಲ್ಲಿ ಪುರಾಣ ಪ್ರಸಂಗಗಳು : ಒಂದು ಅಧ್ಯಯನ – ೨೦೦೮

**೧೯. ಪಡೆದ ಪ್ರಶಸ್ತಿ – ಮನ್ನಣೆ**

**೧. ಕರ್ನಾಟಕ ಜಾನಪದ ಅಕಾಡೆಮಿ – ಪುಸ್ತಕ ಬಹುಮಾನ ಪ್ರಶಸ್ತಿ – ೨೦೦೬**
**೨. ಮಂಟೇಸ್ವಾಮಿ ಪ್ರತಿಷ್ಠಾನ ಪ್ರಶಸ್ತಿ – ೨೦೧೧**

**೨೦. ನಿರ್ವಹಿಸಿದ ಇತರೆ ಕೆಲಸಗಳು**

**೧. ಆಡಳಿತಾತ್ಮಕ ಕೆಲಸಗಳು**

**೨. ಹೆಚ್ಚಿನ ಜವಾಬ್ದಾರಿಗಳು**

೧. ಮುಖ್ಯಸ್ಥರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
೨. ಮುಖ್ಯಸ್ಥರು, ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರ, ಕುರುಬನಕಟ್ಟೆ



PDF created with pdfFactory trial version www.pdffactory.com